**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ. ಸಂಖ್ಯೆ: 1810/2025**

| | | |
|---|---|---|
| ಪಿರ್ಯಾದಿ | : | ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,<br>ಬಣಕಲ್ ತಾಲ್ಲೂಕು. |
| | | ವಿರುದ್ಧ |
| ಆರೋಪಿ | : | ಚಂದ್ರಶೇಖರ್, ವಯಸ್ಸು ಸುಮಾರು 38 ವರ್ಷ,<br>ಬಿನ್ ಗಂಗಯ್ಯ, ವಾಸ: ಕುರಿಪಲ್ಲ, ಉಜಿರೆ,<br>ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. |

**ಆಪಾದನೆಯ ಸಾರಾಂಶ**

ಶ್ರೀಮತಿ ಸುರಕ್ಷ ಕೆ.ಕೆ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆಗಳು ಏನೆಂದರೆ:-

ದಿನಾಂಕ: 01.06.2025 ರಂದು ರಾತ್ರಿ 08.15 ರ ಸಮಯದಲ್ಲಿ ಬಣಕಲ್ ಪೋಲಿಸ್ ಠಾಣಾ ವ್ಯಾಪ್ತಿಯ ಕೊಟ್ಟಿಗೆಹಾರ ಮಲಯ ಮಾರುತ ಸಮೀಪ ಚಾಸಾ-1 ರೇಣುಕೇಶ್ ರವರು ತಮ್ಮ ಬಾಬ್ತು ವಾಹನ ನೋಂದಣಿ ಸಂಖ್ಯೆ ಕೆಎ-14-ಎನ್-5633 ಚವರ್ ಲೆಟ್ ಕಂಪನಿಯ ಕಾರಿನಲ್ಲಿ ಚಾಸಾ-7 ಹೇಮಾವತಿ ಟಿ.ಎಸ್., ಚಾಸಾ-8 ನಯನ ಮತ್ತು ಚಾಸಾ-9 ದಿನೇಶ್ ರವರನ್ನು ಕೂರಿಸಿಕೊಂಡು ಸುಬ್ರಮಣ್ಯದಿಂದ ಶಿವಮೊಗ್ಗಕ್ಕೆ ಹೋಗುತ್ತಿರುವಾಗ ಆರೋಪಿಯಾದ ನೀವು ವಾಹನ ನೋಂದಣಿ ಸಂಖ್ಯೆ: ಕೆಎ-19-ಎಡಿ-2205 ಲಾರಿಯಲ್ಲಿ ತುಂಬಿದ ಸಿಲಿಂಡರ್ ಗಳನ್ನು ತುಂಬಿಕೊಂಡು ಮದ್ಯಪಾನ ಮಾಡಿ ಲಾರಿಯನ್ನು ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **281** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಲಾರಿಯಲ್ಲಿ ತುಂಬಿದ ಸಿಲಿಂಡರ್ ಗಳನ್ನು ತುಂಬಿಕೊಂಡು ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಚಾಸಾ-1 ರವರ ಕಾರನ್ನು ಹಿಂದಿಕ್ಕಿ ಮುಂದೆ ಹೋಗುವಾಗ ಚಾಸಾ-1 ರವರ ಕಾರಿನ ಬಲಭಾಗದ ಡೋರ್ ಗೆ ಜಖಂಗೊಳಿಸಿದ್ದು, ಚಾಸಾ-1 ರವರು ಆರೋಪಿಯಾದ ನಿಮ್ಮಬಳಿ ವಿಚಾರ ಮಾಡಿದಾಗ, ಚಾಸಾ-1 ಮತ್ತು ಚಾಸಾ-7 ರಿಂದ 9 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **352(b)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**3**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ-1 ರವರಿಗೆ ಕೈಯಿಂದ ಕೆನ್ನೆಗೆ ಹೊಡೆದು ನೋವುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **115(2)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**4**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ-1 ರವರನ್ನು ಉದ್ದೇಶಿಸಿ ನಿನ್ನನ್ನು ಇಲ್ಲಿಯೆ ಕೊಲೆ ಮಾಡಿದರೂ ಯಾರು ಕೇಳುವುದಿಲ್ಲ ಎಂದು ದು ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **351(2)**ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**5**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ವಾಹನ ನೋಂದಣಿ ಸಂಖ್ಯೆಃ ಕೆಎ-19-ಎಡಿ-2205 ಲಾರಿಯಲ್ಲಿ ತುಂಬಿದ ಸಿಲಿಂಡರ್ ಗಳನ್ನು ತುಂಬಿಕೊಂಡು ಮದ್ಯಪಾನ ಮಾಡಿ ಲಾರಿಯನ್ನು ಚಲಾಯಿಸಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ವಾಹನ ಕಾಯ್ದೆ ಕಲಂ **185** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ಆರೋಪಿತರಿಗೆ ದಿನಾಂಕ 23.08.2025 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

**Sd/-**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.

ಮೂಡಿಗೆರೆ
ದಿನಾಂಕಃ 23.08.2025